# ಸಂಪಾದಕೀಯ

ಉದಯವಾಣಿ
ಗುರುವಾರ | ಮೇ | 21 | 2015

**ಶುಭನುಡಿ**

ಒಳ್ಳೆ ಕಾಲ ಎಂಬುದು ಯಾವಾಗಲೂ ಧೈರ್ಯವಂತ, ಸವಾಲುಗಳನ್ನು ಎದುರಿಸುವ ಛಾತಿ ಇರುವವರೊಂದಿಗೆ ಇರುತ್ತದೆ. ಹೊರತು. ಎಲ್ಲ ವಿಷಯಗಳಲ್ಲೂ ಕೈಚೆಲ್ಲುವವರ ಬಳಿ ಇರುವುದಿಲ್ಲ.

### ಹಣ ಪಡೆದು ಅವಿರೋಧ ಆಯ್ಕೆ ಮಾಡುವುದು ತಪ್ಪು

## ಗ್ರಾಪಂ ಕಣದಲ್ಲಿ ದುಡ್ಡಿನಾಟ ನಿಲ್ಲಿಸಿ

ಚುನಾವಣೆಯಲ್ಲಿ ಹಣ ಪಡೆದು ಮತ ಹಾಕಿ ಅಭ್ಯರ್ಥಿಯನ್ನು ಗೆಲ್ಲಿಸುವುದು ಚುನಾವಣಾ ಅಕ್ರಮ ಎನ್ನಿಸಿಕೊಳ್ಳುತ್ತದೆ. ಆದರೆ, ನಾಮಪತ್ರ ಸಲ್ಲಿಕೆಗೂ ಮೊದಲೇ ಅಭ್ಯರ್ಥಿಯೊಬ್ಬರಿಂದ ಊರಿನವರೆಲ್ಲ ಸೇರಿ ಯಾವುದಾದರೂ ಸ್ಥಳೀಯ ಯೋಜನೆಗಾಗಿ ಹಣ ಪಡೆದು ಬೇರೆ ಯಾರೂ ಆ ವಾರ್ಡ್‌ನಿಂದ ಸ್ಪರ್ಧಿಸದಂತೆ ನೋಡಿಕೊಂಡು ಆತನನ್ನೇ ಅವಿರೋಧವಾಗಿ ಆಯ್ಕೆ ಮಾಡಿದರೆ?

ಈ ತಿಂಗಳಾಂತ್ಯಕ್ಕೆ ನಡೆಯುವ ಮೊದಲ ಹಂತದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಹೀಗೊಂದು ವ್ಯವಹಾರ ರಾಜಾರೋಷವಾಗಿಯೇ ನಡೆಯುತ್ತಿದೆ. ಇದು ಅಕ್ರಮವೇ ಆಗಿದ್ದರೂ ದಾಖಲೆರಹಿತವಾಗಿ ನಡೆಯುವುದರಿಂದ ಚುನಾವಣಾ ಆಯೋಗ ಸುಮ್ಮನೆ ಕೂರುವ ಸ್ಥಿತಿಯಿದೆ. ಕೊನೆಗೆ ಕಣದಲ್ಲಿ ಉಳಿದ ಒಬ್ಬನೇ ವ್ಯಕ್ತಿಯನ್ನು ವಿಜೇತನನ್ನಾಗಿ ಘೋಷಿಸುವುದು ಮಾತ್ರ ಆಯೋಗದ ಕೆಲಸ.

> ಚುನಾವಣೆಗೂ ಮೊದಲೇ ಊರಿಗೆ ಹಣ ಕೊಟ್ಟು ಅವಿರೋಧವಾಗಿ ಆಯ್ಕೆಯಾಗುವ ವ್ಯಕ್ತಿ, ಮುಂದೆ ಊರಿನ ಅಭಿವೃದ್ಧಿಗೆಂದು ಸರ್ಕಾರದಿಂದ ಬಿಡುಗಡೆಯಾಗುವ ಕೋಟ್ಯಂತರ ರೂ.ಗಳನ್ನು ತನ್ನ ಖರ್ಚಿಗೆ ಪ್ರತಿಫಲ ಎಂಬಂತೆ ನೋಡುವುದಿಲ್ಲವೇ? ಆಗ ನಿಜವಾಗಿ ನಷ್ಟವಾಗುವುದು ಗ್ರಾಮಸ್ಥರಿಗೇ.

ಗ್ರಾಮ ಪಂಚಾಯ್ತಿ ಚುನಾವಣೆಯೆಂಬುದು ರಾಜಕೀಯದ ಮೊದಲ ಮೆಟ್ಟಿಲೇ ಆಗಿದ್ದರೂ ಇದು ಚುನಾವಣಾ ವ್ಯವಸ್ಥೆಯ ಅತ್ಯಂತ ತಳಮಟ್ಟದ ಹಾಗೂ ಜನಜೀವನಕ್ಕೆ ಅತ್ಯಂತ ಸಮೀಪದ ಆಡಳಿತಾತ್ಮಕ ಪರಿಕಲ್ಪನೆಯಾಗಿರುವುದರಿಂದ ಇದಕ್ಕೆ ರಾಜಕೀಯದ ಸೋಂಕು ತಟ್ಟಬಾರದೆಂಬ ಆಶಯ ಸಂವಿಧಾನದಲ್ಲಿದೆ. ಆದ್ದರಿಂದ ಈ ಚುನಾವಣೆಯನ್ನು ರಾಜಕೀಯ ಪಕ್ಷಗಳ ಅಧಿಕೃತ ಚಿಹ್ನೆಯಡಿ ನಡೆಸುವುದಿಲ್ಲ. ಪರೋಕ್ಷವಾಗಿ ಈ ಚುನಾವಣೆಯನ್ನು ರಾಜಕೀಯ ಪಕ್ಷಗಳೇ ಹಿನ್ನೆಲೆಯಲ್ಲಿ ನಿಂತು ನಿರ್ವಹಿಸುತ್ತವೆಯಾದರೂ ಆಶಯದಲ್ಲಿ ಈಗಲೂ ಇದು ಪಕ್ಷಾತೀತ ಹಾಗೂ ರಾಜಕೀಯರಹಿತ ಚುನಾವಣೆಯೇ. ಹಾಗಿದ್ದರೂ ಇಲ್ಲಿ ಹಣದ ಆಟ ಎಗ್ಗಿಲ್ಲದೆ ನಡೆಯುವುದು ನಿಜಕ್ಕೂ ದುರದೃಷ್ಟಕರ.

ಸದ್ಯ ಮೊದಲನೇ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಅವಧಿ ಮುಗಿದಿದೆ. 180ಕ್ಕೂ ಹೆಚ್ಚು ಸ್ಥಾನಗಳಿಗೆ ಯಾರೂ ನಾಮಪತ್ರ ಸಲ್ಲಿಸಿಲ್ಲ, ಅವುಗಳಲ್ಲಿ ಕೆಲವೆಡೆ ಚುನಾವಣೆ ಬಹಿಷ್ಕರಿಸಲಾಗಿದೆ. ಇನ್ನುಳಿದ ಕಡೆ ಊರಿನವರೆಲ್ಲ ಸೇರಿ ಯಾವುದಾದರೂ ಅಭಿವೃದ್ಧಿ ಕಾರ್ಯಕ್ಕೆ ಮೊದಲೇ ಒಬ್ಬ ವ್ಯಕ್ತಿಯಿಂದ ಹಣ ಪಡೆದು ಅವನೊಬ್ಬನೇ ನಾಮಪತ್ರ ಸಲ್ಲಿಸುವಂತೆ ನೋಡಿಕೊಂಡಿದ್ದಾರೆ. ಈ ವ್ಯಕ್ತಿಯನ್ನು ಆಯ್ಕೆ ಮಾಡುವಾಗ ರಾಮನಗರ ಹಾಗೂ ಮಂಡ್ಯ ಜಿಲ್ಲೆಯ ಕೆಲ ಗ್ರಾಮ ಪಂಚಾಯ್ತಿಗಳಲ್ಲಿ ಅತಿ ಹೆಚ್ಚು ಹಣ ಕೊಡುವವರು ಯಾರು ಎಂಬುದನ್ನು ನಿರ್ಧರಿಸಲು ಬಿಡ್ಡಿಂಗ್ ಕೂಡ ನಡೆದಿದೆ ಎಂದು ಪತ್ರಿಕಾ ವರದಿಗಳು ಹೇಳುತ್ತವೆ. ಹೀಗೆ ಮಾಡುವುದು ಕಾನೂನಿಗೆ ವಿರುದ್ಧ ಎಂಬುದು ಒಂದೆಡೆಯಾದರೆ, ಹೀಗೆ ಆಯ್ಕೆಯಾಗುವ ವ್ಯಕ್ತಿ ಮುಂದೆ ಎಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾನೆಂಬುದು ಮುಖ್ಯ ಪ್ರಶ್ನೆ. ಊರಿಗೆ ಅತ್ಯವಶ್ಯವಾಗಿ ಬೇಕಿರುವ ಯೋಜನೆಗೆ ಈಗಲೇ ಅವನಿಂದ ಹಣ ಸಿಗುತ್ತದೆಯಾದರೂ, ಮುಂದೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬರುವ ಕೋಟ್ಯಂತರ ರೂ. ಅನುದಾನವನ್ನು ಇವನು ಈ ಹಿಂದೆ ಖರ್ಚು ಮಾಡಿದ ಹಣಕ್ಕೆ ಪ್ರತಿಫಲ ಎಂಬಂತೆ ನೋಡುವುದಿಲ್ಲವೇ? ಆಗ ನಿಜವಾಗಿ ನಷ್ಟವಾಗುವುದು ಆತನನ್ನು ಆಯ್ಕೆ ಮಾಡಿದ ವಾರ್ಡ್‌ನ ಜನರಿಗೇ. ಇದು ರಾಜಕೀಯ ವ್ಯವಸ್ಥೆಯನ್ನು ತಳಮಟ್ಟದಿಂದಲೇ ಭ್ರಷ್ಟಗೊಳಿಸುವ ಇನ್ನೊಂದು ವಿಧಾನವೂ ಹೌದು. ಚುನಾವಣಾ ಆಯೋಗ ಇದರ ಬಗ್ಗೆ ಗಂಭೀರವಾಗಿ ಗಮನ ಹರಿಸದಿರುವುದರ ಉದ್ದೇಶ ಅರ್ಥವಾಗುತ್ತಿಲ್ಲ.

ಎರಡನೇ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕಡೆಯ ದಿನ ನಾಳೆ ಶುಕ್ರವಾರ. ಅಲ್ಲೂ ಒಂದಷ್ಟು ಊರುಗಳಲ್ಲಿ ಒಬ್ಬೊಬ್ಬ ಅಭ್ಯರ್ಥಿ ಮಾತ್ರ ನಾಮಪತ್ರ ಸಲ್ಲಿಸಬಹುದು. ಆಗಲಾದರೂ ಚುನಾವಣಾ ಆಯೋಗ ಎಚ್ಚೆತ್ತುಕೊಂಡು ಅಲ್ಲಿ ಹಣದ ಬಿಡ್ಡಿಂಗ್ ನಡೆದಿರುವ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಊರಿನಲ್ಲಿ ರಾಜಕೀಯ ಆಕಾಂಕ್ಷೆಯಿರುವ ಶ್ರೀಮಂತರು ಯಾರಿದ್ದಾರೋ ಅವರೇ ಹಣ ಕೊಟ್ಟು ಸೀಟು ಖರೀದಿಸುತ್ತಾರೆ. ಮುಂದಿನ ಐದು ವರ್ಷಗಳ ಕಾಲ ಊರಿನ ಅಭಿವೃದ್ಧಿಯ ಹಣೆಬರಹವನ್ನು ಅವರೇ ನಿರ್ಧರಿಸುತ್ತಾರೆ. ಆಗ ಬಡವರ ಏಳ್ಗೆಯ ಗ್ರಾಮ ಸ್ವರಾಜ್ಯದ ಕನಸಿನ ಕತೆ ಏನಾದೀತು?

### ಕೆರೆ ನೊರೆ ಬಗ್ಗೆ 10-15 ವರ್ಷಗಳಿಂದ ಹೇಳ್ತಿದ್ದೇನೆ. ಯಾರೂ ಕೇಳ್ತಿಲ್ಲ: ರಾಮಚಂದ್ರ

# ಕೆರೆಗಳಿಗೂ ಬೆಂಕಿ ಬೀಳ್ತಿದೆ. ಯಾಕೆ?

**ನೇರಾ ನೇರ**

ಖಡಕ್ ಪ್ರಶ್ನೆಗೆ... ಖಡಕ್ ಉತ್ತರ

ಸಂದರ್ಶನ

ವಿಜಯಕುಮಾರ್ ಚಂದರಗಿ

> “
> ● ಕೆರೆಗಳ ಸಂರಕ್ಷಣೆಗಾಗಿ ಈಗ ಏನು ಮಾಡಬಹುದು?
>
> ಬಿಡಿಎ, ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ ಸೇರಿದಂತೆ ಸರ್ಕಾರ ಅಂಗ ಸಂಸ್ಥೆಗಳು ಎನಿಸಿಕೊಂಡರೂ ಒಂದಕ್ಕೊಂದು ಸಂಬಂಧ ಇಲ್ಲದಂತಿವೆ. ಕೆರೆ ಅಭಿವೃದ್ಧಿ ಪ್ರಾಧಿಕಾರ ಹಲ್ಲಿಲ್ಲದ ಹಾವಿನಂತಾಗಿದೆ. ಕೆರೆ ಸಂರಕ್ಷಣಾ ಏಜೆನ್ಸಿ ಮಾಡಬೇಕು. ಅದು ಕೆರೆ ಒತ್ತುವರಿ ತೆರವು, ಕಲುಷಿತಗೊಂಡರೆ ಕ್ರಮ, ನಿರ್ವಹಣೆ ಮಾಡುವ ಅಧಿಕಾರ, ಆ ಕೆರೆಯಿಂದ ಬರುವ ಇತರ ಆದಾಯವನ್ನು ಅಭಿವೃದ್ಧಿಗಾಗಿಯೇ ವಿನಿಯೋಗಿಸುವುದು ಸೇರಿದಂತೆ ಎಲ್ಲವನ್ನೂ ಒಳಗೊಳ್ಳಬೇಕು. ಮತ್ತೆ ಇದಕ್ಕಾಗಿ ಫಾರಿನ್‌ಗೆ ಹೋಗೋದು ಬೇಡ! ಇಲ್ಲಿಯೇ ಜಕ್ಕೂರಿನಲ್ಲಿ ನೈಸರ್ಗಿಕವಾಗಿ ಕೆರೆ ಅಭಿವೃದ್ಧಿಪಡಿಸಲಾಗಿದೆ. ಅಲ್ಲಿಗೆ ಭೇಟಿ ಕೊಟ್ಟರೆ ಸಾಕು.
> ”

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಇದೀಗ ಕೆರೆಗಳದ್ದೇ ಸದ್ದು. ಒಂದೆಡೆ ಒತ್ತುವರಿಯಾಗಿದ್ದ ಕೆರೆಯಂಗಳ ಸಂರಕ್ಷಿಸಲು ತೆರವು ಕಾರ್ಯಾಚರಣೆ ಆರಂಭವಾಗಿ ನಂತರ ತಾತ್ಕಾಲಿಕವಾಗಿ ಸ್ಥಗಿತಗೊಂಡು ಆಡಳಿತಾರೂಢ ಕಾಂಗ್ರೆಸ್ ಮತ್ತು ಪ್ರತಿಪಕ್ಷಗಳ ನಡುವಿನ ರಾಜಕೀಯ ಸಮರಕ್ಕೆ ವೇದಿಕೆ ಮಾಡಿಕೊಟ್ಟಿದೆ. ಮತ್ತೊಂದೆಡೆ ಕೆರೆಗಳ ನೊರೆ ರಸ್ತೆಯನ್ನು ಆವರಿಸಿದ್ದಲ್ಲದೆ, ಕೆರೆಗೇ ಬೆಂಕಿ ಬೀಳುವಂಥ ಅಪರೂಪದ ಘಟನೆಗಳು ನಡೆಯುತ್ತಿವೆ. ಆ ಕೆರೆಯ ಸುತ್ತಲಿರುವ ನಿವಾಸಿಗಳು ಆತಂಕದಿಂದಲೇ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬೆನ್ನಲ್ಲೇ ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ವಿಧಾನಸಭೆಯ ಸದನ ಸಮಿತಿ ಕಳೆದೆರಡು ದಿನಗಳಿಂದ ನಗರ ಪ್ರದಕ್ಷಿಣೆ ಹಾಕಿ ಕೆರೆ ಪ್ರದೇಶದ ವೀಕ್ಷಣೆ ನಡೆಸಿದ್ದಾರೆ. ಈ ಸದನ ಸಮಿತಿ ನೀಡುವ ವರದಿ ಆಧಾರದ ಮೇಲೆ ಕೆರೆಗಳ ಮತ್ತು ಒತ್ತುವರಿ ಮಾಡಿಕೊಂಡ ಕಟ್ಟಡಗಳ ಭವಿಷ್ಯ ನಿರ್ಧಾರವಾಗಲಿದೆ. ಈಗ ಬೆಂಗಳೂರಿನಲ್ಲಿ ಆರಂಭವಾಗಿರುವ ಆತಂಕ ಮುಂದಿನ ದಿನಗಳಲ್ಲಿ ರಾಜ್ಯದೆಲ್ಲೆಡೆ ವಿಸ್ತರಿಸುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. ಹೀಗಾಗಿ ಒಟ್ಟಾರೆ ಕೆರೆಗಳ ಪರಿಸ್ಥಿತಿ, ಅವುಗಳ ಸಂರಕ್ಷಣೆ, ಸರ್ಕಾರ ಏನು ಮಾಡಬೇಕು ಎಂಬಿತ್ಯಾದಿ ಅಂಶಗಳನ್ನು ಮುಂದಿಟ್ಟುಕೊಂಡು ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪರಿಸರ ವಿಜ್ಞಾನಗಳ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಕೆರೆಗಳ ತಜ್ಞ **ಡಾ.ಟಿ.ವಿ.ರಾಮಚಂದ್ರ** ಅವರೊಂದಿಗೆ 'ನೇರಾನೇರ' ಮಾತಿಗಿಳಿದಾಗ...

**● ಬೆಂಗಳೂರಿನ ಕೆರೆಗಳ ಸ್ಥಿತಿ ಚಿಂತಾಜನಕ ಆಗಿದೆಯಲ್ಲ?**

ನಿಜಕ್ಕೂ ಬೆಂಗಳೂರಿನ ಕೆರೆಗಳ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಶೇ. 79ರಷ್ಟು ಕೆರೆಕುಂಟೆಗಳು ಕಳೆದುಹೋಗಿವೆ. ಅದರೊಂದಿಗೆ ಶೇ. 78ರಷ್ಟು ಮರಗಳೂ ಕಡಿಮೆಯಾಗಿವೆ. ಇನ್ನು 1973ರಲ್ಲಿ ನಗರದಲ್ಲಿ ಕಾಂಕ್ರೀಟಿಕರಣದ ಪ್ರಮಾಣ 5448 ಹೆಕ್ಟೇರ್. 2010ಕ್ಕೆ ಅದು 40 ಸಾವಿರ ಹೆಕ್ಟೇರ್‌ಗೆ ವಿಸ್ತರಿಸಿದೆ. ಅಂದರೆ ಮೂರ್‍ನಾಲ್ಕು ದಶಕಗಳಲ್ಲಿ ಕಾಂಕ್ರೀಟ್ ಕಟ್ಟಡ, ರಸ್ತೆಗಳ ಪ್ರಮಾಣ ಶೇ. 632ರಷ್ಟಾಗಿದೆ!

**● ಮನೆ ಅಥವಾ ಕಟ್ಟಡಕ್ಕೆ ಬೆಂಕಿ ಬೀಳುವುದನ್ನು ನೋಡಿದ್ದೇವೆ. ಕೆರೆಗಳಿಗೇ ಬೆಂಕಿ ಬೀಳುವ ಕಾಲ ಬಂದಿದೆಯಲ್ಲ?**

ಇದು ಪರಿಸರದ ಮೇಲೆ ನಾವು ಮಾಡುತ್ತಿರುವ ಆಕ್ರಮಣಕ್ಕೆ ಹಿಡಿದ ಕನ್ನಡಿ. ಬೇಕಾಬಿಟ್ಟಿ ರಾಸಾಯನಿಕ ಅಂಶಗಳನ್ನು ಕೆರೆಗೆ ಹಾಕಿದರೆ ಏನಾಗಬೇಕು? ಕೆರೆಗೂ ಸಹಿಸಿಕೊಳ್ಳಲು ಒಂದು ಮಿತಿ ಇದೆ. ಅದರಾಚೆಗೆ ಏನೂ ಮಾಡಲಿಕ್ಕಾಗದು.

**● ಹಾಗಾದರೆ ಕೆರೆಯು ಈ ಆಕ್ರಮಣ ತಡೆಯಲಿಕ್ಕಾಗದೆ, ತಾನಾಗಿಯೇ ಹೊತ್ತಿಉರಿಯಿತಾ?!**

ಛೇ..ಛೇ..ಹಾಗಲ್ಲ, ಸುತ್ತಲಿನ ಕೈಗಾರಿಕೆಗಳಲ್ಲೆಲ್ಲೋ ಪೆಟ್ರೋಲಿಯಂ ಅಂಶ ಸೋರಿಕೆಯಾಗಿದೆ. ಅದನ್ನು ಕೆರೆಗೆ ಬಿಡಲಾಗಿದೆ. ನೊರೆ ಇರುವುದರಿಂದ ಮೇಲೆ ತೇಲುತ್ತಿರುವ ಆ ಪೆಟ್ರೋಲಿಯಂ ಅಂಶಕ್ಕೆ ಯಾರೋ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಅದೇ ಈ ಅನಾಹುತಕ್ಕೆ ಕಾರಣವಾಗಿದೆ.

**● ಬೆಳ್ಳಂದೂರು ಕೆರೆ ಈ ಹಂತ ತಲುಪುವವರೆಗೂ ವಿಜ್ಞಾನಿಗಳು ಮೌನವಾಗಿದ್ದಿದ್ದೇಕೆ? ಸರ್ಕಾರಕ್ಕೆ ಗಮನ ಸೆಳೆಯಬಹುದಿತ್ತಲ್ಲಾ?**

ವರ್ತೂರು, ಬೆಳ್ಳಂದೂರು ಕೆರೆಗಳಲ್ಲಿ 10-15 ವರ್ಷಗಳಿಂದಲೂ ಇದೇ ರೀತಿ ನೊರೆ ಬರುತ್ತಿದೆ. ಗಾಳಿ ಬಿಟ್ಟಾಗ ಕೆರೆಯ ತಳದಲ್ಲಿರುವ ಪಾಸ್ಫರಸ್ ಎಂಬ ರಾಸಾಯನಿಕ ಮಂಥನಗೊಂಡು ನೊರೆ ಉತ್ಪತ್ತಿಯಾಗುತ್ತದೆ. ಹತ್ತಾರು ವರ್ಷಗಳಿಂದ ನಾನು ಇದನ್ನೇ ಹೇಳುತ್ತಾ ಬಂದಿದ್ದೇನೆ. ಬೆಳ್ಳಂದೂರು ಕೆರೆ ಜೌಗು ಪ್ರದೇಶ ಅತಿಕ್ರಮಣ ಆಗುತ್ತಿರುವುದು ಹಾಗೂ ಯಾರ್‍ಯಾರೋ ಅಲ್ಲಿ ಏನೇನೋ ತಂದು ಸುರಿಯುತ್ತಿರುವ ಬಗ್ಗೆ ಎರಡು ವರ್ಷಗಳ ಹಿಂದೆಯೇ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೂ (ಬಿಬಿಎಂಪಿ) ಹಲವು ಬಾರಿ ಹೇಳಿದ್ದೇನೆ. ಆದರೆ, ಯಾರೂ ಕೇಳೋರೇ ಇಲ್ಲವಲ್ಲ, ಈಗ ಅದೇ ಕೆರೆಗೆ ಬೆಂಕಿ ಬಿದ್ದಿದೆ.

**● ಅಂದರೆ, ನಿಮ್ಮ ಮನವಿ, ಸಲಹೆ ಬಗ್ಗೆ ಸರ್ಕಾರ ಕಿವುಡನಂತೆ ವರ್ತಿಸಿದೆ ಎಂದಾಯಿತು?**

ನಾನು ಸರ್ಕಾರವನ್ನು ದೂರಲಿಕ್ಕೆ ಹೋಗಲ್ಲ, ಸರ್ಕಾರಕ್ಕೆ ನಾನು ಬರೆದಿದ್ದೇನೆ. ಅವರು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಕಳುಹಿಸಿರುತ್ತಾರೆ. ಆ ಅಧಿಕಾರಿಗಳು ಆ ಫೈಲ್ ಮೇಲೆ ಮಲಗಿರುತ್ತಾರೆ ಅಷ್ಟೇ. ಇತ್ತೀಚೆಗೆ ಮಂತ್ರಿ ಟೆಕ್‌ಝೋನ್ ಪ್ರೈ.ಲಿ., ಕಂಪೆನಿಗೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (ಎನ್‌ಜಿಟಿ) ಪೀಠ ಸುಮಾರು 117.35 ಕೋಟಿ ರೂ. ದಂಡ ವಿಧಿಸಿತು. ಇದಕ್ಕೂ ಮೊದಲು ನಾನು ಈ ಬಗ್ಗೆ ಅಧ್ಯಯನ ನಡೆಸಿ, ಸರ್ಕಾರದ ಗಮನಸೆಳೆದಿದ್ದೆ. ಆದರೆ, ಏನೂ ಆಗಲಿಲ್ಲ. ಕೊನೆಗೆ ಕೋರಮಂಗಲ ನಿವಾಸಿಗಳು ಮತ್ತು ನಮ್ಮ ಬೆಂಗಳೂರು ಪ್ರತಿಷ್ಠಾನ ಅದೇ ವರದಿ ತೆಗೆದುಕೊಂಡು ಎನ್‌ಜಿಟಿ ಮೊರೆಹೋದಾಗ, ನ್ಯಾಯ ಸಿಕ್ಕಿತು.

**● ನಗರದ ಇನ್ನೂ ಯಾವ್ಯಾವ ಕೆರೆಗಳಿಗೆ ಬೆಂಕಿ ಬೀಳುವ ಸಾಧ್ಯತೆಯಿದೆ?**

ದಾಸರಹಳ್ಳಿ, ದೀಪಾಂಜಲಿನಗರ, ಅಮೃತಹಳ್ಳಿ, ಮಹದೇವಪುರ, ನಾಗವಾರ, ತಿರುಮನೆಹಳ್ಳಿ, ಹಲಸೂರು, ಚಿಕ್ಕಬಾಣಾವರ, ಚುಂಚನಘಟ್ಟ, ಹೆಬ್ಬಾಳ, ಕಲ್ಕೆರೆ, ಕೆಂಗೇರಿ, ಕೊಡಗಿಸಿಂಗಸಂದ್ರ, ಕೋಣನಕುಂಟೆ, ಕುಂದಲಹಳ್ಳಿ, ನಲ್ಲೂರುಹಳ್ಳಿ, ರಾಮಪುರ, ರಾಯಸಂದ್ರ, ವರ್ತೂರು, ಯಲ್ಲಮ್ಮ ಮಲ್ಲಪ್ಪಚೆಟ್ಟಿ, ಸುಬ್ರಾಯನ ಕೆರೆಗಳಲ್ಲೂ ರಾಸಾಯನಿಕ ದ್ರವ್ಯಗಳು ಸೇರಿಕೊಂಡಿರುವುದು ಅಪಾಯದ ಸಂಕೇತ. ಆದರೆ, ಬೆಳ್ಳಂದೂರಿನ ಅಮಾನಿ ಕೆರೆಯಲ್ಲಿ ತಾನಾಗಿಯೇ ಬೆಂಕಿ ಹೊತ್ತಿಕೊಂಡಿದ್ದಲ್ಲ, ಯಾರೋ ಎಸೆದ ಕಿಡಿಯಿಂದ ರಾಸಾಯನಿಕ ದ್ರವ್ಯಕ್ಕೆ ಬೆಂಕಿ ಹೊತ್ತಿಕೊಂಡಿದೆ.

**● ಆದರೆ, ಬೆಳ್ಳಂದೂರು ಕೆರೆಯಲ್ಲಿ ರಾಸಾಯನಿಕ ದ್ರವ್ಯಗಳೇ ಇಲ್ಲ ಅಂತ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹೇಳುತ್ತದೆ?**

ನಾನೂ ಆ ಹೇಳಿಕೆ ಗಮನಿಸಿದ್ದೇನೆ. ಆದರೆ, ನಾವು ಅಧ್ಯಯನ ನಡೆಸಿದಾಗ ಅಲ್ಲಿ ಭಾರದ ಲೋಹಗಳು ಕೂಡ ಕಂಡುಬಂದಿವೆ. ಹಾಗಾಗಿ, ಮಂಡಳಿ ಕೂಡ ಸರಿಯಾಗಿ ಕೆಲಸ ಮಾಡುತ್ತಿದೆಯೇ ಎಂಬುದರ ಬಗ್ಗೆ ನನಗೆ ಅನುಮಾನ ಬರುತ್ತಿದೆ.

**● ನಿಮ್ಮ ಪ್ರಕಾರ ಕೈಗಾರಿಕೆಗಳೇ ದೋಷಿಗಳು ಎನ್ನಬಹುದು?**

ಅವರಷ್ಟೇ ಅಲ್ಲ; ಅಪಾರ್ಟ್‌ಮೆಂಟ್‌ಗಳೂ ಈ ಅನಾಹುತಕ್ಕೆ ಕಾರಣ. ಕಾನೂನು ಪ್ರಕಾರ ಪ್ರತಿ ಅಪಾರ್ಟ್‌ಮೆಂಟ್ ಒಂದು ಕೊಳಚೆ ನೀರು ಶುದ್ಧೀಕರಣ ಘಟಕ ಹೊಂದಿರಲೇಬೇಕು. ಆದರೆ, ಎಷ್ಟು ಅಪಾರ್ಟ್‌ಮೆಂಟ್‌ಗಳು ಇದನ್ನು ಪಾಲಿಸುತ್ತಿವೆ? ರಾತ್ರೋರಾತ್ರಿ ಟ್ಯಾಂಕರ್‌ಗಳಲ್ಲಿ ಬಂದು ಸುರಿದುಹೋಗುತ್ತಿದ್ದಾರೆ. ಹೇಳೋರಿಲ್ಲ ಕೇಳೋರಿಲ್ಲ ಎನ್ನುವಂತಾಗಿದೆ.

**● ಹಾಗಾದ್ರೆ, ನಿಯಮ ಪಾಲನೆ ಮತ್ತು ಕೆರೆಗಳ ರಕ್ಷಣೆಯಲ್ಲಿ ಸರ್ಕಾರದ ಜವಾಬ್ದಾರಿ ಎಲ್ಲಿದೆ?**

ಅಯ್ಯೋ ಎಲ್ಲರೂ ಕಳ್ಳರೇ. ಅಪಾರ್ಟ್‌ಮೆಂಟ್‌ಗಳು ನಿಯಮಬಾಹಿರವಾಗಿ ನಡೆದುಕೊಳ್ಳುತ್ತಿದ್ದರೂ ಕುರುಡಾಗಿರುವ ಅಧಿಕಾರಿಗಳೂ ಈ ಕೆರೆಗಳು ಕಲುಷಿತಗೊಳ್ಳಲು ಕಾರಣವಾಗಿದ್ದಾರೆ. ಸಿಗ್ನಲ್ ಜಂಪ್ ಮಾಡಿದವರನ್ನು ಹಿಡಿದು ದಂಡ ಹಾಕುವಾಗ, ಇಷ್ಟು ದೊಡ್ಡ ಅನಾಹುತಗಳಿಗೆ ಕಾರಣರಾದವರನ್ನೂ ಜೈಲಿಗೆ ಹಾಕಬೇಕು. ಅಷ್ಟೇ ಅಲ್ಲ, ಒತ್ತುವರಿ ಅಥವಾ ಅತಿಕ್ರಮಣ ಮಾಡಲು ಸಾಥ್ ನೀಡಿದವರನ್ನೂ ಮುಲಾಜಿಲ್ಲದೆ ಜೈಲಿಗೆ ಅಟ್ಟಬೇಕು.

**● ಆದರೆ, ಸರ್ಕಾರ ನೀವು ಹೇಳುವ 'ಸಾಥ್ ನೀಡಿದ'ವರನ್ನು ಬಿಟ್ಟು, ಬಡ ಅಮಾಯಕರ ಮೇಲೆ ತನ್ನ 'ಪ್ರಾಮಾಣಿಕತೆ ಪ್ರಯೋಗ' ಮಾಡುತ್ತಿದೆ ಎನಿಸುವುದಿಲ್ಲವೇ?**

ಒತ್ತುವರಿ ಮತ್ತು ಕಬಳಿಕೆಯಲ್ಲಿ ಬಡವ-ಶ್ರೀಮಂತ ಎನ್ನುವುದೇ ಇಲ್ಲ, ನಿಯಮ ಉಲ್ಲಂಘಿಸಿ ಒತ್ತುವರಿ ಮಾಡಿದ್ದಾರೆ ಎನ್ನುವುದಷ್ಟೇ. ಎಲ್ಲ ಕೆರೆಗಳ ಒತ್ತುವರಿಯನ್ನೂ ಮುಲಾಜಿಲ್ಲದೆ ತೆರವುಗೊಳಿಸಬೇಕು. ನಂತರ ಆ ತೆರವುಗೊಂಡವರನ್ನು ಹಿಡಿದರೆ, ಅದಕ್ಕೆ ಸಾಥ್ ಕೊಟ್ಟವರೂ ಸುಲಭವಾಗಿ ಸಿಗುತ್ತಾರೆ. ಸರ್ಕಾರಕ್ಕೆ ಅದೇನೂ ದೊಡ್ಡ ಕೆಲಸವಲ್ಲ. ಆದರೆ, ಮನಸ್ಸು ಮಾಡಬೇಕಷ್ಟೇ.

**ಪ್ರೊ.ಟಿ.ವಿ.ರಾಮಚಂದ್ರ**

ಹಿರಿಯ ವಿಜ್ಞಾನಿ ಹಾಗೂ ಕೆರೆಗಳ ತಜ್ಞ



**● ಅಷ್ಟಕ್ಕೂ ಈ ಸತ್ತ ಕೆರೆಗಳನ್ನು ತೆಗೆದುಕೊಂಡು ಸರ್ಕಾರ ಏನು ಮಾಡುತ್ತದೆ ಎಂದು ಪ್ರತಿಪಕ್ಷಗಳು ಕೇಳುತ್ತಿವೆ?**

ಅದು ಶುದ್ಧ ತಪ್ಪು. ಕೆರೆ ಯಾವತ್ತೂ ಸಾಯುವುದಿಲ್ಲ. ಸಾಮಾನ್ಯವಾಗಿ ಕೆರೆಗಳು ತಗ್ಗುಪ್ರದೇಶದಲ್ಲಿರುತ್ತವೆ. ಮಳೆಗಾಲ ಆರಂಭವಾಗುತ್ತಿದ್ದಂತೆ ತೆರವಾದ ಕೆರೆ ಅಂಗಳದಲ್ಲಿ ನೀರು ತುಂಬಿಕೊಳ್ಳುತ್ತದೆ. ಸಹಜವಾಗಿ ಅಲ್ಲಿ ಅಂತರ್ಜಲ ಮರುಪೂರಣವಾಗುತ್ತದೆ.

**● ಅಂದರೆ ನಿಮ್ಮ ಪ್ರಕಾರ ಬೆಂಗಳೂರು ಹಿಂದಿನಂತೆ ಮತ್ತೆ ಕೆರೆಗಳಿಂದ ಕಂಗೊಳಿಸಸುವ ಸಾಧ್ಯತೆಯಿದೆ ಅಂತೀರಾ?**

ಸರ್ಕಾರ ಮುಲಾಜಿಲ್ಲದೆ, ಎಲ್ಲ ಕೆರೆ ಮತ್ತು ರಾಜಕಾಲುವೆಗಳನ್ನು ಯಾವುದೇ ಪ್ರಭಾವಕ್ಕೊಳಗಾಗದೆ ತೆರವುಗೊಳಿಸಿ, ಪುನಶ್ಚೇತನಕ್ಕೆ ಕ್ರಮ ಕೈಗೊಂಡರೆ ನಮ್ಮ ಬೆಂಗಳೂರು ಮತ್ತೆ ಹಿಂದಿನಂತೆ ಕೆರೆಗಳಿಂದ ನಳನಳಿಸುವುದು ಸಾಧ್ಯ.

**● ಆ ಕನಸು ನನಸಾಗಲು ಎಷ್ಟು ವರ್ಷ ಬೇಕಾಗಬಹುದು?**

ಅದು ಸರ್ಕಾರವನ್ನು ಅವಲಂಬಿಸಿದೆ. ತೆರವಾದ ಕೆರೆಗಳನ್ನು ನನ್ನ ಪ್ರಕಾರ 12ರಿಂದ 15 ತಿಂಗಳಲ್ಲಿ ಪುನಶ್ಚೇತನಗೊಳಿಸಬಹುದು. ಆದರೆ, ಸರ್ಕಾರ ಮನಸ್ಸು ಮಾಡಬೇಕಷ್ಟೇ. ಸರ್ಕಾರ ಮನಸ್ಸು ಮಾಡದಿದ್ದರೆ, 1,500 ವರ್ಷಗಳಾದರೂ ಹೀಗೇ ಇರುತ್ತದೆ.

**● ಇದು ದೀರ್ಘಕಾಲದ ಪರಿಹಾರ ಆಯ್ತು. ತಕ್ಷಣಕ್ಕೆ ಸರ್ಕಾರ ಏನು ಮಾಡಬೇಕು?**

ಕೆರೆ ಅಂಗಳದಲ್ಲಿ ಯಾರ್‍ಯಾರೋ ಬಂದು ಏನೇನೋ ಹಾಕುತ್ತಾರೆ. ರಾತ್ರೋರಾತ್ರಿ ಕಲುಷಿತ ಆಗುತ್ತಿದೆ. ನೊರೆ ಏಳುತ್ತದೆ. ಬೆಂಕಿ ಹೊತ್ತಿಕೊಳ್ಳುತ್ತಿದೆ. ಇದಕ್ಕಾಗಿ ಹೊಯ್ಸಳ ಮಾದರಿಯಲ್ಲಿ ವಿಚಕ್ಷಣ ದಳ ರಚಿಸಲಿ. ಅಥವಾ ಹೊಯ್ಸಳಕ್ಕೇ ಈ ಅಧಿಕಾರ ಕೊಡಲಿ. ಕೊನೆಪಕ್ಷ ಸದ್ಯಕ್ಕೆ ಕಲುಷಿತ ಪ್ರಮಾಣವಾದರೂ ತಗ್ಗುತ್ತದೆ.

**● ಕೆರೆ ಒತ್ತುವರಿ ಸದನ ಸಮಿತಿಗಿಂತ ತಾಂತ್ರಿಕ ಸಮಿತಿ ಅಗತ್ಯ ಇತ್ತಾ?**

ಹಾಗೇನಿಲ್ಲ, ಸದನ ಸಮಿತಿ ನೀಡುವ ಶಿಫಾರಸುಗಳಿಗೆ ಹೆಚ್ಚು ಪ್ರಾಮುಖ್ಯತೆ ಇರುತ್ತದೆ. ಸದನದಲ್ಲಿದ್ದವರೇ ಸಮಿತಿಯಲ್ಲಿರುವುದರಿಂದ ಇದು ಸೂಕ್ತ ನಿರ್ಧಾರ. ಇದು ನೀಡಿದ ಶಿಫಾರಸುಗಳ ಅನುಷ್ಠಾನ, ಕೆರೆ ರಕ್ಷಣೆಗೆ ಒತ್ತು ಮತ್ತಿತರ ಕಾರ್ಯಗಳಿಗೆ ತಾಂತ್ರಿಕ ಸಮಿತಿ ಅವಶ್ಯಕತೆ ಬೀಳಬಹುದು.

**● ಕೆರೆಗಳಲ್ಲಿರುವ ಮಿಥೇನ್‌ನಿಂದ ವಿದ್ಯುತ್ ಉತ್ಪಾದಿಸುವ ನಿಟ್ಟಿನಲ್ಲಿ ಯಾಕೆ ಯೋಚಿಸಬಾರದು?**

ಖಂಡಿತಾ, ಘನತ್ಯಾಜ್ಯದಿಂದ ಗ್ಯಾಸ್ ಉತ್ಪಾದಿಸಿದಂತೆಯೇ ಕೆರೆಗೆ ಕೊಳಚೆ ನೀರಿನಲ್ಲಿ ಸಾಕಷ್ಟು ಮಿಥೇನ್ ಇರುತ್ತದೆ. ಅದು ವಿದ್ಯುತ್ ಉತ್ಪಾದನೆಗೆ ಪೂರಕವಾದ ಅಂಶ. ಕೆರೆ ಸೇರುವ ಮೊದಲೇ ಆ ಮಿಥೇನ್ ಹೊರತೆಗೆದು, ವಿದ್ಯುತ್ ಉತ್ಪಾದಿಸಬಹುದು. ಆದರೆ, ಅದರ ನಿರ್ವಹಣೆ ನಮ್ಮ ಸರ್ಕಾರದಿಂದ ನಿರೀಕ್ಷಿಸುವುದು ಕಷ್ಟ ಕಷ್ಟ. ಹಾಗಾಗಿ, ಇದಕ್ಕಿಂತ ಮುಖ್ಯವಾಗಿ ಜೌಗು ಪ್ರದೇಶ ಮತ್ತು ಪಾಚಿಯಿಂದಲೇ ಸಾಕಷ್ಟು ಶುದ್ಧೀಕರಣ ಪ್ರಕ್ರಿಯೆ ನಡೆಯುತ್ತದೆ. ಇದು ನೈಸರ್ಗಿಕ ಪ್ರಕ್ರಿಯೆ ಕೂಡ ಆಗಿದೆ. ಇದಕ್ಕೆ ಹೆಚ್ಚು ಒತ್ತುಕೊಡುವ ಅಗತ್ಯವಿದೆ ಎಂಬುದು ನನ್ನ ಅಭಿಪ್ರಾಯ.

**● ಇದೆಲ್ಲಾ ಸರಿ. ಆದರೆ ವಿಜ್ಞಾನಿಗಳ ಸಂಶೋಧನೆ ಕೇವಲ ಲ್ಯಾಬ್‌ಗೆ ಸೀಮಿತ ಎಂಬ ಸಾಮಾನ್ಯ ಆರೋಪವೂ ಇದೆ?**

ನಾವು ಬೆಳ್ಳಂದೂರು ಮತ್ತು ವರ್ತೂರು ಕೆರೆ ಮಾದರಿ ಸಂಗ್ರಹಿಸಿ, ಅಧ್ಯಯನ ಮಾಡಿ ಸರ್ಕಾರಕ್ಕೆ ಕೊಡುವುದು ನಮ್ಮ ಕೆಲಸ. ಅದು ಧೂಳು ತಿನ್ನದಂತೆ ನೋಡಿಕೊಳ್ಳುವುದು ಸರ್ಕಾರದ ಕೆಲಸ. ನಮ್ಮದು ಎಚ್ಚರಿಕೆ ಗಂಟೆ ಅಷ್ಟೇ. ಜಕ್ಕೂರು ಕೆರೆ ರಕ್ಷಣೆ, ಪಶ್ಚಿಮಘಟ್ಟದಲ್ಲಿ ಹಸಿರುಗೋಡೆ ರಕ್ಷಣೆ, ದೇವರ ಕಾಡು ರಕ್ಷಣೆ ಬಗ್ಗೆ ಜಾಗೃತಿ ಮೂಡಲು 2009ರಲ್ಲಿ ನಾನು ಇಂಟರ್‌ನ್ಯಾಷನಲ್ ಜರ್ನಲ್‌ನಲ್ಲಿ ಲೇಖನ ಪ್ರಕಟವಾಗಿದ್ದೇ ಕಾರಣವಾಯಿತು. ನಮ್ಮ ಕ್ಯಾಂಪಸ್‌ನಲ್ಲಿ ಕೆರೆ ಕಟ್ಟಿಸಿದ್ದೇವೆ. ನಮ್ಮ ಜತೆ ಕೈಜೋಡಿಸಿದ ಸಂಸ್ಥೆಗಳೂ ಕೆರೆ ನಿರ್ಮಾಣ ಮಾಡುವಂತೆ ಮಾಡಿದ್ದೇವೆ. ಮಕ್ಕಳಿಗೂ ಪ್ರಾಯೋಗಿಕವಾಗಿ ಪರಿಸರದ ಬಗ್ಗೆ ತಿಳಿಸಿಕೊಡುತ್ತಿದ್ದೇವೆ.